ಸಾಕ್ಷಿಯನ್ನು ದಿನಾಂಕಃ-27.2.2023 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

**<u>ಮುಂದುವರಿದ ಪಾಟೀಸವಾಲುಃ- ಆರೋಪಿತರ ಪರ ವಕೀಲರಿಂದ ಃ-</u>**

1. ನಾನು ಮತ್ತು ನನ್ನ ಅಣ್ಣ ನಾಗರಾಜು ಚೆನ್ನಾಗಿದ್ದೇವೆ ಎಂದರೆ ಸರಿ. ಆರೋಪಿ ಈ ಪ್ರಕರಣದಲ್ಲಿ ಪ್ರತ್ಯುತ್ತರ ನೀಡಿರುವ ಬಗ್ಗೆ ನಾನು ನನ್ನ ಅಣ್ಣನ ಜೊತೆ ಚರ್ಚೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಬಗ್ಗೆ ಮಹದೇಶ್ವರ ಬೆಟ್ಟದಲ್ಲಿ ಪತ್ರಿಕೆ ವರದಿಯ ಬಗ್ಗೆ ನನ್ನ ಅಣ್ಣ ನನ್ನ ಬಳಿ ಚರ್ಚೆ ಮಾಡಿರುವುದಿಲ್ಲ ಮತ್ತು ನಾನು ಅವರ ಬಳಿ ಅದರ ಬಗ್ಗೆ ಚರ್ಚೆ ಮಾಡಿರುವುದಿಲ್ಲ. ಆ ವಿಚಾರದ ಬಗ್ಗೆ ನನ್ನ ಅಣ್ಣನ ಬಳಿ ಚರ್ಚೆ ಮಾಡಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಆ ವಿಚಾರದ ಬಗ್ಗೆ ಮಾಹಿತಿ ಇರಲಿಲ್ಲ ವ್ಎಂದು ನುಡಿದಿದ್ದಾರೆ. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತ್ಯುತ್ತರ ನೋಟಿಸಿನಲ್ಲಿ ಆರೋಪಿ ತಿಳಿಸಿರುವಂತೆ ಆರೋಪಿಯ ಚಕ್ಕನ್ನು ನನ್ನ ಅಣ್ಣ ಕದ್ದಿರುವ ಆರೋಪದ ಬಗ್ಗೆ ನಾನು ನನ್ನ ಅಣ್ಣನ ಬಳಿ ಅದನ್ನು ಚರ್ಚೆ ಮಾಡಿರುವುದಿಲ್ಲ. ನೋಟಿಸಿನಲ್ಲಿ ಆರೋಪಿ ತಿಳಿಸಿರುವ ವಿಷಯದ ಬಗ್ಗೆ ನನ್ನ ಅಣ್ಣನ ಬಳಿ ಚರ್ಚೆ ಮಾಡಲು ನನಗೆ ಯಾವುದೆ ತೊಂದರೆ ಇರಲಿಲ್ಲ.

2. ಇದ್ದಾರೆ. ಆರೋಪಿ ನನಗೆ ಮಹದೇಶ್ವರ ಬೆಟ್ಟದಲ್ಲಿ ಪರಿಚಯ ಆಗಿರುತ್ತಾರೆ. ನನ್ನ ತಂದೆ ಕಂಡಕ್ಟರ್ ಆಗಿ ಮಹದೇಶ್ವರ ದೇವಸ್ಥಾನದ ಬಸ್ಸಿನಲ್ಲಿ ಕೆಲಸ ಮಾಡುತ್ತಿದ್ದರು ಆಗಿನಿಂದ ನನಗೆ ಆರೋಪಿಯ ಪರಿಚಯ ಆಗಿರುತ್ತದೆ. ಸದರಿ ದೇವಸ್ಥಾನದ ಬಸ್ಸಿನಲ್ಲಿ ಆರೋಪಿಯನ್ನು ಮೇಲುಸ್ತುವಾರಿ ಕೆಲಸಕ್ಕೆ ಹಾಕಿಕೊಂಡಿರಲಿಲ್ಲ. ಆರೋಪಿ ನನಗೆ ಚಿಕ್ಕವಯಸ್ಸಿನಿಂದ ಮಹದೇಶ್ವರ ಬೆಟ್ಟದ ಮುಜರಾಯಿ ಇಲಾಖೆಯ ಕಛೇರಿಯಲ್ಲಿ ಪರಿಚಯ ಆಗಿರುತ್ತಾರೆ. ಆರೋಪಿ ನನಗೆ ಪರಿಚಯ ಆದ ಸಂದರ್ಭದಲ್ಲಿ ಟೈಪಿಸ್ಟಾಗಿ ಕೆಲಸ ಮಾಡುತ್ತಿದ್ದರು. 18 ವರ್ಷದ ಹಿಂದೆ ಆರೋಪಿಗೆ ಎಷ್ಟು ವೇತನ ಇತ್ತು ಎಂದು ನನಗೆ ಗೊತ್ತಿಲ್ಲ. 18 ವರ್ಷದ ಹಿಂದೆನನ್ನ ತಂದೆಗೆ ಎಷ್ಟು ವೇತನ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ನಾಗರಾಜು ಕೆಲಸಕ್ಕೆ ಸೇರಿ ಸುಮಾರು 20 ವರ್ಷ ಆಗಿರಬಹುದು. ನನ್ನ ಅಣ್ಣ ಕೆಲಸಕ್ಕೆ ಸೇರಿದಾಗ ಅವರಿಗೆ ಎಷ್ಟು ವೇತನ ಇತ್ತು ನನಗೆ ಗೊತ್ತಿಲ್ಲ. 18 ವರ್ಷದ ಹಿಂದೆ ನಾನು ಪ್ರೌಢಶಾಲೆಯಲ್ಲಿ ಓದುತ್ತಿದ್ದೆ. ನನ್ನ ಅಣ್ಣ ನಾಗರಾಜು ಕೂಡ

ಟೈಪಿಸ್ಟಾಗಿ ಕೆಲಸ ಮಾಡುತ್ತಿದ್ದರು. ಈಗ ನನ್ನ ಅಣ್ಣ ಎಸ್ಟಾಬ್ಲಿಷ್‌ಮೆಂಟ್ ಡಿಪಾರ್ಟಮೆಂಟಲ್ಲಿ ಕೆಲಸ ಮಾಡುತ್ತಿದ್ದಾರೆ.

3. **18** ವರ್ಷದಿಂದ ಆರೋಪಿ ನಮ್ಮ ಮನೆಯ ಯಾವುದಾದರು ಕಾರ್ಯಕ್ರಮಕ್ಕೆ ಬಂದು ಭಾಗವಹಿಸಿದ ಬಗ್ಗೆ ಫೋಟೋಗಳನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ನಾನು ಆರೋಪಿಯ ಮನೆಯ ಯಾವುದಾದರು ಕಾರ್ಯಕ್ರಮಕ್ಕೆ ಹೋಗಿ ಭಾಗವಹಿಸಿದ ಬಗ್ಗೆ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ವಿವಾಹವಾಗಿರುವುದಿಲ್ಲ. ನಮ್ಮಕುಟುಂಬದಲ್ಲಿ ಆದಂತಹ ಮದುವೆಗೆ ಆರೊಪಿ ಬಂದಿದ್ದರು ಆದರೆ ಪೋಟೋಗಳು ಇದೆಯೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಪೋಟೋಗಳು ಇದೆಯೊ ಇಲ್ಲವೊ ತಿಳಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ.

4. ಆರೋಪಿಗೆ ಇಬ್ಬರು ಮಕ್ಕಳು. ಅವರಿಗೆ ಮದುವೆಯಾಗಿರುತ್ತದೆ. ಸದರಿ ಮದುವೆಗೆ ನಾನು ಹೋಗಿರುವ ಬಗ್ಗೆ ಯಾವುದೆ ದಾಖಲೆಗಳು ಇಲ್ಲ. ಸದರಿ ಮದುವೆಗಳು ಎಲ್ಲಿ ಆಗಿವೆ ನನಗೆ ಗೊತ್ತಿಲ್ಮ. ಆರೋಪಿ ತಮ್ಮ ಮಕ್ಕಳು ಮದುವೆಯ ಬಗ್ಗೆ ಆಮಂತ್ರಣ ಪತ್ರಿಕೆಯನ್ನು ಕೊಟ್ಟಿರುತ್ತಾರೆ ಆದರೆ ಅವು ನನ್ನ ಬಳಿ ಇಲ್ಲ. ನಾನು ಸುಮಾರು **5-6** ವರ್ಷಗಳಿಂದ ಮೊಬೈಲ್ ದೂರವಾಣಿಯನ್ನು ಉಪಯೋಗಿಸುತೇನೆ. ನನ್ನ ಮೊಬೈಲ ದೂರವಾಣಿ ಸಂಖ್ಯೆ **748332223.** ನನ್ನ ಮೊಬೈಲು ದೂರವಾಣಿ ಸಂಖ್ಯೆಯಿಂದ ಆರೋಪಿ ಮೊಬೈಲಿಗೆ ನನಾನು ಯಾವತ್ತು ಕರೆಯನ್ನು ಮಾಡಿರುವುದಿಲ್ಲ. ಆರೋಪಿಯ ಮೊಬೈಲು ದೂರವಾಣಿ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಮತ್ತು ಆರೋಪಿಗೆ ಯಾವುದೇ ಪರಿಚಯ ಇಲ್ಲದಿದ್ದರು ಕೂಡ ನನ್ನ ಅಣ್ಣ ಕದ್ದಿರುವ ಆರೋಪಿಯ ಚಕ್ಕನ್ನು ದುರುಪಯೋಗಪಡಿಸಿಕೊಂಡು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮಲ್ಲಿಕ್ಯಾತನಹಳ್ಳಿ ಗ್ರಾಮವನ್ನು ಯಾವತ್ತು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಈ ಹಿಂದೆ ಯಾವತ್ತು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಈ ನ್ಯಾಯಾಲಯಕ್ಕೆ ಬಂದ ನಂತರವೆ ನೋಡಿರುವುದು ಎಂದರೆ ಸರಿಯಲ್ಲ.

5. ಆರೋಪಿ ಮಲ್ಲಿಕ್ಯಾತನಹಳ್ಳಿಗ್ರಾಮಕ್ಕೆ ದಿಃ **16.5.2013** ರಂದು ಬಂದಿದ್ದರು. ಆರೋಪಿ ಆ ದಿನ ಎಷ್ಟು ಗಂಟೆಗೆ ಬಂದಿದ್ದರು ಎಂದು ನನ್ನ ಪಿರಾದಿನಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ದಿಃ **16.5.2013** ರಂದು ಯಾವ ವಾರ ಆಗಿತ್ತು ಎಂದು ನನಗೆ ನೆನಪಿಲ್ಲ. ಆರೋಪಿಗೆ ನಾನು ಹಣವನ್ನು ನಮ್ಮ ಮನೆಯಲ್ಲೆ ಕೊಟ್ಟಿರುತ್ತೇನೆ ಎಂದು ನನ್ನಪಿರ್ಯಾದಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ಪಿರ್ಯಾದಿನಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣ ಗೊತ್ತಿದೆ ಎಂದರೆ ಸರಿ. ನಾನು ಆರೋಪಿಗೆ ಹಣವನ್ನು ಎಲ್ಲಿ ಕೊಟ್ಟಿದ್ದೇನೆ ಎಂದು ಪಿರಾದಿನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಮೂದು ಮಾಡದೆ ಇದ್ದರು ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಿಕ್ಯಾತನಹಳ್ಳಿ ಗ್ರಾಮದಲ್ಲಿ ನಾನು ಆರೋಪಿಗೆ ಹಣ ಕೊಟ್ಟಂತ ಸಂದರ್ಭದಲ್ಲಿ ಬೇರೆ ಯಾರೂ ಇರಲಿಲ್ಲ. ಆರೋಪಿ ತಮ್ಮ ಯಜಮಾನರ ಜೊತೆ ಬಂದಿದ್ದರು. ಆರೋಪಿಯ ಯಜಮಾನರ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ಆರೋಪಿಯ ಯಜಮಾನರ ದಾಖಲೆಗಳನ್ನು ಪಡಕೊಳ್ಳಲು ನನಗೆ ಯಾವುದೆ ತೊಂದರೆ ಇರಲಿಲ್ಲ. ಆರೋಪಿಯ ಜೆತೆ ಅವರ ಯಜಮಾನರು ಬಂದಿರುವ ವಿಚಾರವನ್ನು ನಾನು ಪಿರ್ಯಾದಿನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ಆರೋಪಿಗೆ ನಾನು ಹಣವನ್ನು ಕೊಡುವ ಮುಂಚೆ ಅವರು ನನ್ನನ್ನು ಭೇಟಿ ಮಾಡಿರಲಿಲ್ಲ.

6. ಆರೋಪಿಗೆ ನಾನು ಹಣವನ್ನು ಕೊಟ್ಟಿದ್ದೇನೆ ಎಂದು ಹೇಳುವ ದಿನ ನನ್ನ ಬಳಿ **4** ಲಕ್ಷ ನಗದು ಇತ್ತು ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. **2013** ರಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಸ್ತಿರಾಸ್ತಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವತ ಒಂದು ಗೂಡ್ಸು ಆಟೋ ಇತ್ತು ಎಂದು ನುಡಿದಿದ್ದಾರೆ. ಸದರಿ ಆಟೋ ಸಂಖ್ಯೆ ಕೆಎ **09 9257.** ಸದರಿ ಆಟೊವನ್ನು ನಾನು ಫೈನಾನ್ಸಲ್ಲಿ ಕೊಂಡಿರಲಿಲ್ಲ. ಸದರಿ ಆಟೊದ ಮೇಲು ಸಹ ಫೈನಾನ್ಸು ಇದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **2013** ನೆ ಇಸವಿಯಲ್ಲಿ ನಾನು ಬ್ಯಾಂಕು ಖಾತೆಯನ್ನು ತೆರದಿದ್ದೆ. ದಿಃ **16.5.2013** ರ ನನ್ನ ಬ್ಯಾಂಕು ಖಾತೆಯ ಸ್ಟೇಟ್ ಮೆಂಟನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿದೆ ಇರಲು ಯಾವುದೆ ತೊಂದರೆ ಇಲ್ಲ. ಆರೋಪಿಗೆ **4** ಲಕ್ಷ ಹಣವನ್ನು ನೀಡಲು ನನಗೆ ಸಾಮರ್ಥ್ಯ ಇಲ್ಲದೆ ಇದ್ದರು ಕೂಡ ನನ್ನ ಅಣ್ಣನ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **2013** ನೆ ಇಸವಿಯಲ್ಲಿ

ಆರೋಪಿಗ ಎಷ್ಟು ವೇತನ ಬರುತ್ತಿತ್ತು ಎಂಬ ಬಗ್ಗೆ ನಾನು ಅವರ ವೇತನ ದೃಢೀಕರಣ ಪತ್ರವನ್ನು ನೋಡಿರುವುದಿಲ್ಲ. **2013** ರಲ್ಲಿ ಆರೋಪಿಯ ಪತಿ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು. ಆರೋಪಿಯ ಪತಿ **2012-13** ನೆ ಸಾಲಿನಲ್ಲಿ ಎಷ್ಟು ಹಣದ ಕಂಟ್ರಾಕ್ಟನ್ನು ಮಾಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಗೆ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣದ ಅವಶ್ಯಕತೆ ಇಲ್ಲದಿದ್ದರು ಕೂಡ ನನ್ನ ಅಣ್ಣ ಆರೋಪಿಯಿಂದ ಕದ್ದಿರುವ ಚಕ್ಕನ್ನು ದುರುಪಯೋಗಪಡಿಸಿಕೊಂಡು ಲಾಭ ಮಾಡಿಕೊಳ್ಳಬೇಕೆಂಬ ದುರುದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಆರೋಪಿಯಿಂದ ಕದ್ದಿರುವ **8-10** ಚಕ್ಕುಗಳನ್ನು ಉಪಯೋಗಿಸಿಕೊಂಡು ನನ್ನ ಅಣ್ಣ ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಬೇರೆ ಬೇರೆಯವರ ಮೂಲಕ ಹಲವಾರು ದೂರುಗಳನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ವಕೀಲರ ಮೂಲಕ ಆರೋಪಿಯ ಬಗ್ಗೆ ದಾಖಲಾತಿಗಳನ್ನು ಮಹದೇಶ್ವರ ಬೆಟ್ಟದದೇವಸ್ಥಾನದ ಕಛೇರಿಯಲ್ಲಿ ಕೇಳಿಸಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಿಲ್ಲಎಂದು ನುಡಿದಿದ್ದಾರೆ.

8. ನಿಪಿ **1** ಚಕ್ಕನ್ನು ಯಾರು ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಹಣವನ್ನು **2** ತಿಂಗಳ ನಂತರ ಹಿಂತಿರುಗಿಸಲು ಒಪ್ಪಿಕೊಂಡಿರುತ್ತಾರೆ ಎಂದು ಹೇಳಿರುವ ಬಗ್ಗೆ ಯಾವುದೇ ಪತ್ರವ್ಯವಹಾರ ಮಾಡಿರುವುದಿಲ್ಲ. ದಿಃ **15.07.2013** ರಂದು ನಾನು ಆರೋಪಿಯನ್ನು ಮಹದೇಶ್ವರ ಬೆಟ್ಟದಲ್ಲಿ ದೇವಸ್ಥಾನದ ಕಛೇರಿಯಲ್ಲಿ ಭೇಟಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿ ತಮ್ಮ ಕಛೇರಿ ಕೊಠಡಿಯಲ್ಲಿ ಒಬ್ಬರೆ ಇದ್ದರು. ಸದರಿಕಛೇರಿಯಲ್ಲಿ ಎಷ್ಟು ಪ್ರತ್ಯೇಕ ಕೊಠಡಿಗಳಿವೆ ಎಂದು ನನಗೆ ಗೊತ್ತಿಲ್ಲ. ಆದರೆ ಒಂದು ಭಾಗದಲ್ಲಿ **4** ಚೇಂಬರುಗಳನ್ನು ಮಾಡಿದ್ದರು. ಆರೋಪಿಯ ಚೇಂಬರಲ್ಲದೆ ಅಲ್ಲಿ ಟೈಪುರೈಟರು , ವಾಹನವಿಭಾಗದ ಚೇಂಬರುಗಳು ಇದ್ದವು. ಆ ಸಂದರ್ಭದಲ್ಲಿ ಸದರಿ ಚೇಂಬರಿನ ಸಿಬ್ಬಂದಿಯವರು ಇರಲಿಲ್ಲ. ನನ್ನ ಅಣ್ಣ ನಾಗರಾಜು ಕೂಡ ಅಲ್ಲೆ ಕೆಲಸ ಮಾಡುತ್ತಿದ್ದರು ಅವರನ್ನು ನಾನು ಆ ಸಮಯದಲ್ಲಿ ಆರೋಪಿಯ ಬಳಿ ಕರೆದುಕೊಂಡು ಹೋಗಿರುವುದಿಲ್ಲ. ಆ ದಿನ ಆರೋಪಿಯ ಪತಿಯನ್ನು ನಾನು ಭೇಟಿ ಮಾಡಿರುವುದಿಲ್ಲ. ಆರೋಪಿಯ ಪತಿಯ ಬಳಿ ನಾನು ಆರೋಪಿಗೆ ಹಣ ಕೊಟ್ಟುದನ್ನು ಆರೋಪಿ ಮರುಪಾವತಿ ಮಾಡದೆ ಇರುವ ಬಗ್ಗೆ ಅವರ ಪತಿಯನ್ನು ವಿಚಾರಿಸಿರುವುದಿಲ್ಲ . ಹಣದ

ವ್ಯವಹಾರದ ಬಗ್ಗೆ ಆರೋಪಿಯ ಪತಿಯನ್ನು ವಿಚಾರ ಮಾಡದೆ ಇರಲು ನನಗೆ ಯಾವುದೆ ತೊಂದರೆ ಇರಲಿಲ್ಲ.

**ಮುಂದುವರಿದ ಪಾಟೀ ಸವಾಲನ್ನು ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್ಸಿ
ಮಳವಳ್ಳಿ